**ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆ.ಎಂ.ಎಫ್.ಸಿ.**
**ನ್ಯಾಯಾಲಯ ಮಾಗಡಿ**

# ಕ್ರಿಮಿನಲ್ ಪ್ರಕರಣ ಸಂಖ್ಯೆ: 553/2021

ಪಿರ್ಯಾದುದಾರರು : ಕುದೂರು ಪೋಲಿಸು ಠಾಣೆ

**ವಿರುದ್ಧ**

**ಆರೋಪಿ : ಕುಮರೇಶ್**

**ಚಾಸಾ:01/**ಪ್ರಾಸಾ:02

| | |
|---|---|
| ಹೆಸರು | **ಪ್ರಕಾಶ್** |
| ತಂದೆಯ ಹೆಸರು | **ರಾಮಯ್ಯ** |
| ವಯಸ್ಸು | **34** |
| ಉದ್ಯೋಗ | **ವ್ಯವಸಾಯ** |
| ವಿಳಾಸ | **ರಾಜೇಗೆರೆ ಗ್ರಾಮ** |

**ದಿನಾಂಕಃ 24-09-2025 ರಂದು** ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ :-**

ಮೃತ ವ್ಯಕ್ತಿ ನನಗೆ ಪರಿಚಯಸ್ಥರು. ಈಗೆ ಸುಮಾರು 5 ವರ್ಷಗಳ ಹಿಂದೆ ತಾಳೇಕೆರೆ ಹ್ಯಾಂಡ್ ಪೋಸ್ಟ್ ಬಳಿ ಯಾವುದೋ ಕೆಲಸದ ಮೇಲೆ ಹೋಗಿದ್ದು, ಅಲ್ಲಿ ಆಟೋಗಾಗಿ ಕಾಯುತ್ತಾ ನಿಂತಿದ್ದಾಗ ಮೃತ ನಾಗರಾಜುರವರು ಅಂಚೆಪಾಳ್ಯದ ಕಡೆಯಿಂದ ನೆಲಮಂಗಲಕಡೆಗೆ ಬಂದು ಉ ಟರ್ನ್ ಮಾಡಿಕೊಂಡು ಬಂದು ಕುಣಿಗಲ್ ಕಡೆಗೆ ನಿದಾನವಾಗಿ ದ್ವಿ ಚಕ್ರವಾಹನ ಸ್ಪಂಡ್ಲರ್ ಪ್ಲೆಸ್ ನಲ್ಲಿ ಬರುತ್ತಿದ್ದಾಗ ಒಂದು ಎಲ್ಟಿಗಾ ಕಾರು ಅತಿವೇಗವಾಗಿ ಬಂದು ದ್ವಿ ಚಕ್ರವಾಹನಕ್ಕೆ ಡಿಕ್ಕಿಪಡಿಸಿದ ಪರಿಣಾಮ ಮೈ,ತಲೆ, ಮೈಕೈ ಗೆ ಪೆಟ್ಟಾಗಿ ಸ್ಥಳದಲ್ಲಿಯೇ ಮೃತಪಟ್ಟಿರುತ್ತಾರೆ. ನಂತರ ನೆಲಮಂಗಲ ಸರ್ಕಾರಿ ಆಸ್ಪತ್ರೆಗೆ ಹೋಗಿ ನಾನು ಅಲ್ಲಿಂದ ಬಂದು ಕುದೂರು ಪೋಲೀಸ್ ಠಾಣೆಯಲ್ಲಿ ದೂರನ್ನು ದಾಖಲಿಸಿರುತ್ತೇನೆ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ದೂರು ಆಗಿದ್ದು, ದೂರನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ-2 ದೂರಿನ ಮೇರೆಗೆ ಪೋಲೀಸರು ಸ್ಥಳ ಪಂಚನಾಮೆಯನ್ನು ಜರುಗಿಸಿರುತ್ತಾರೆ. ನಿಪಿ-2 ಮಹಜರ್ ನ್ನು ದೂರು ನೀಡಿದ ಸುಮಾರು ಆಜು ಬಾಜು 15 ದಿನಗಳ ಒಳಗೆ ಜರುಗಿಸಿರುತ್ತಾರೆ. ಮಹಜರ್ ಜರುಗಿಸಿ ಸದರಿ ಸ್ಥಳದಲ್ಲಿ ನನ್ನ ಸಹಿಯನ್ನು ಪಡೆದುಕೊಂಡಿರುತ್ತಾರೆ. ಮಹಜರ್ ಸಮಯದಲ್ಲಿ ನನ್ನ ಹೊರತು ಪಡಿಸಿ ಯಾರು ಸಹಿ ಮಾಡಿದ್ದಾರೆ ಎಂದು ನನಗೆ ಗೊತ್ತಿಲ್ಲ.

ಸಾಕ್ಷಿಗೆ ಇನ್ನೊಂದು ದಾಖಲಾತಿಯನ್ನು ತೋರಿಸಿ ಅದರಲ್ಲಿ ತಮ್ಮ ಸಹಿಯನ್ನು ನೋಡಿ ಗುರುತಿಸುವಂತೆ ಕೇಳಿದಾಗ ಸಾಕ್ಷಿಯು ನೋಡಿ ಗುರುತಿಸಿದ್ದು, ಸದರಿ ದಾಖಲಾತಿ ಸ್ಥಳ ಮಹಜರ್ ಆಗಿದ್ದು, ಸ್ಥಳ ಮಹಜರ್ ನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-1(ಬಿ)ಎಂದು ಗುರುತಿಸಲಾಯಿತು.

ಸಾಕ್ಷಿಯು ಅಪಘಾತ ಪಡಿಸಿದ ಎರಡು ಪೋಟೋಗಳನ್ನು ನೋಡಿ ಗುರೂತಿಸಿರುತ್ತಾರೆ.ಸದರಿ ಎರಡು ಪೋಟೋಗಳನ್ನು ಕ್ರಮವಾಗಿ ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಸಾಕ್ಷಿಯು ಅಪಘಾತ ಪಡಿಸಿದ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ,** ಪಾಟೀ **ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ,** ಪಾಟೀ **ಸವಾಲು ಮಾಡಲು ಅನುಮತಿ ನೀಡಲಾಯಿತು.**

ಪಾಟೀ **ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ದಿನಾಂಕಃ 13.08.2020ರಂದು ಮಧ್ಯಾಹ್ನ 3.15ರ ಸಮಯದಲ್ಲಿ ಮೃತ ನಾಗರಾಜು ರವರು ಅವರ ಬಾಬ್ತು ಕೆಎ-02-ಹೆಚ್ ಎಂ-5409 ಬೈಕ್ ನಲ್ಲಿ ಬರುತ್ತಿದ್ದರು ಎಂದರೆ ಸರಿ. ಅದೇ ಸಮಯದಲ್ಲಿ ಕುಣಿಗಲ್ ಕಡೆಯಿಂದ ನೆಲಮಂಗಲ ಕಡೆಗೆ ಬರುತ್ತಿದ್ದ ವಾಹನ ಕೆಎ-01-ಎಂಕೆ-2454 ಮಾರುತಿ ಸುಜುಕಿ ಎಲ್ಡಿಗಾ ಕಾರು ಬರುತ್ತಿತ್ತು ಎಂದರೆ ಸರಿ.

ಅಪಘಾತ ವಾದ ದಿನದಂದೇ ದಿನಾಂಕಃ 13.08.2020ರಂದು ನೀವು ಕುದೂರು ಪೋಲೀಸ್ ಠಾಣೆಗೆ ದೂರನ್ನು ದಾಖಲಿಸಿರುತ್ತೀರೀ ಎಂದರೆ ಸರಿ.ನೀವು ನೀಡಿದ ದೂರಿನ ಆದಾರದ ಮೇರೆಗೆ ಪೋಲೀಸರು ದಿಃ 14.08.2020ರಂದು ಮಧ್ಯಾಹ್ನ 12.00 ರಿಂದ1.00 ಗಂಟೆ ಸಮಯದಲ್ಲಿ ನೀವು ತೋರಿಸಿದ ಜಾಗದಲ್ಲಿ ಚಾಸಾ-2 ಮತ್ತು 3ರವರ ಸಮಕ್ಷಮ ಸ್ಥ, ಪಂಚನಾಮೆಯನ್ನು ಜರುಗಿಸಿ ನಿಮ್ಮಗಳ ಸಮಕ್ಷಮ ಅಪಘಾತ ಪಡಿಸಿದ ಹಾಗೂ ಅಪಘಾತಗೊಳಗಾದ ಮೇಲ್ಕಂಡ ಸಂಖ್ಯೇಯ ಎರಡು ವಾಹನಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ ಎಂದರೆ ಸರಿ. ಆ ಸಮಯದಲ್ಲಿ ಪೋಲೀಸರು ನಿಮ್ಮಗಳ ಸಮಕ್ಷಮ ಒಂದು ಕಚ್ಚಾನಕ್ಷೆಯನ್ನು ಸಹ ತಯಾರಿಸಿರುತ್ತಾರೆ ಎಂದರೆ ಸರಿ. ಪ್ರಕರಣ ನಡೆದು ಸುಮಾರು 5 ವರ್ಷ ವಾದ್ದರಿಂದ ನೀವು ದಿನಾಂಕ, ಸಮಯ ಹಾಗೂ ವರ್ಷವನ್ನು ಮರೆತ್ತೀರಿ ಎಂದರೆ ಸರಿ.

ಪಾಟೀ **ಸವಾಲು :- ಶ್ರೀ. ಎಸ್.ಎಸ್.ಬಿ.** ವಕೀಲರಿಂದ **ಆರೋಪಿ** ಪರವಾಗಿ:-

ನೀವು ಏನು ವಿದ್ಯಾಭ್ಯಾಸ ಮಾಡಿರುತ್ತೀರೀ ಎಂದರೆ ಸಾಕ್ಷಿಯು ಐ.ಟಿ.ಐ. ಮಾಡಿರುತ್ತೇನೆ ಎಂದು ನುಡಿಯುುತ್ತಾರೆ. ನೀವು ನಿಮ್ಮ ದೂರಿನಲ್ಲಿ ನಮೂದು ಮಾಡಿರುವ ವಿಳಾಸವನ್ನೇ ಸಹ ನಿಮ್ಮ ಆದಾರ್ ಕಾರ್ಡ ನಲ್ಲಿ ನಮೂದು ಮಾಡಿರುತ್ತೀರೀ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ದೂರನ್ನು ನೀವೇ ಬರೆದುಕೊಟ್ಟಿರುತ್ತೀರಾ ಎಂದರೆ ಸಾಕ್ಷಿಯು ನಾನೇ ನನ್ನ ಕೈಯಲ್ಲಿ ಬರೆದುಕೊಟ್ಟಿರುತ್ತೇನೆ ಎಂದು ನುಡಿಯುುತ್ತಾರೆ. ಯಾರು ಹೇಳಿ ಬರೆಸಿರುತ್ತಾರೆ ಎಂದರೆ, ಪೋಲೀಸರು ಹೇಳಿ ಬರೆಸಿರುತ್ತಾರಾ ಎಂದರೆ ಸಾಕ್ಷಿಃಯು ನಾನೇ ಬರೆದಿರುತೆತೇನೆ ಎಂದು ನುಡಿಯುತ್ತಾರೆ. ಎಷ್ಟು ಗಂಟೆಗೆ ಬರೆದಿರುತ್ತಿರೀ ಎಂದರೆ ಸಾಕ್ಷಿಯು ಸಮಯ ನೆನಪಿಲ್ಲ, ಸುಮಾರು ಸಂಜೆ ಅಗಿರುತ್ತದೆ ಎಂದು ನುಡಿಯುತ್ತಾರೆ. ಅಪಘಾತ ಎಷ್ಟು ಗಂಟೆಗೆ ಆಗಿರುತ್ತದೆ ಎಂದರೆ ಸಾಕ್ಷಿಯು ಸುಮಾರು 3.00 ರಿಂದ 4.00 ಗಂಟೆ ಆಜುಬಾಜು ಆಗಿರುತ್ತದೆ ಎಂದು ನುಡಿಯುತ್ತಾರೆ.

2. ನೀವು ಶವವನ್ನು ಯಾವಾಗ ಆಸ್ಪತ್ರೆಗೆ ತೆಗೆಪಿದುಕೊಂಡು ಹೋಗಿರುತ್ತೀಡಿರೀ ಎಂದರೆ ಸಾಕ್ಷಿಯು ಆಂಬುಲೆನ್ಸ್ ಬರಲು ಅರ್ದಗಂಟೆ ತಡವಾಗಿರುತ್ತದೆ ನಂತರ ತೆಗೆದುಕೊಂಡು ಹೋಗಿರುತ್ತೇವೆ ಎಂದು ನುಡಿಯುತ್ತಾರೆ.

ಆಂಬುಲೆನ್ಸ್ ನಲ್ಲಿ ಯಾರು ಯಾರು ಹೋಗಿರುತ್ತೀರೀ ಎಂದರೆ ಸಾಕ್ಷಿಯು ನಾನು ಮತ್ತು ಮೃತ ವ್ಯಕ್ತಿಯ ಹೆಂಡತಿ ಇದ್ದರು ಹಾಗೂ ಇನ್ನೂ 3 ಜನರು ಇದ್ದರು ಯಾರು ಯಾರು ಎಂದು ಗೊತ್ತಿಲ್ಲ ಎಂದು ನುಡಿಯುತ್ತಾರೆ. ಮೃತ ವ್ಯಕ್ತಿಯ ಹೆಂಡತಿಯ ಹೆಸರು ಏನು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಆಸ್ಪತ್ರೆಗೆ ಪೋಲೀಸರುಯಾವಾಗ ಬಂದಿರುತ್ತಾರೆ ಎಂದರೆ ಸಾಕ್ಷಿಯು ಸಮಯ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನೀವು ವೈದ್ಯರು ಬರುವವರೆಗೂ ಅಲ್ಲಿಯೇ ಇರುತ್ತಿರಾ ಎಂದರೆ ಸಾಕ್ಷಿಯು ಇಲ್ಲ ನಾನು ದೂರು ನೀಡಲು ಠಾಣೆಗೆ ಬಂದಿರುತ್ತೇನೆ ಎಂದು ನುಡಿಯುತ್ತಾರೆ. ನೀವು ಗಾಯಾಳು ಇದ್ದ ಸ್ಥಳಕ್ಕೆ ಏಕೆ ಹೋಗಿರುತ್ತೀರೀ ಯಾವ ವಾಹನದಲ್ಲಿ ಹೋಗಿರುತ್ತೀರೀ ಎಂದರೆ ಸಾಕ್ಷಿಯು ನಾನು ಪ್ಯಾಸೆಂಜರ್ ಆಟೋದಲ್ಲಿ ಹೋಗಿದ್ದು, ನಾನು ತಾಳೀಕೆರೆ ಹ್ಯಾಂಡ್ ಪೋಸ್ಟ್ ನಲ್ಲಿ ಇಳಿದುಕೊಂಡಿರುತ್ತೇನೆ. ನಂತರ ನನ್ನ ಕೆಲಸ ಮುಗಿದ ಮೇಲೆ ನಾನು ಆಟೋವಿಗಾಗಿ ಕಾಯತ್ತಾ ನಿಂತಿದ್ದೇನು ಎಂದು ನುಡಿಯುತ್ತಾರೆ. ಆ ಸಮಯದಲ್ಲಿ ನಿಮ್ಮ ಜೊತೆ ಯಾರು ಇದ್ದರು ಎಂದರೆ ಸಾಕ್ಷಿಯು ಯಾರು ಇರಲಿಲ್ಲ ಎಂದು ನುಡಿಯುತ್ತಾರೆ.

3. ಮೃತ ವ್ಯಕ್ತಿ ಬೈಕ್ ಓಡಿಸುತ್ತಿದ್ದರು ಎಂದು ಹೇಳಿದ್ದು, ಅವರು ನಿಮಗೆ ಪರಿಚಯ ಇದ್ದಾರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅವರು ನಿಮಗೆ ಸಂಬಂಧಿಕರ ಎಂದರೆ ಸಾಕ್ಷಿಯು ಸಂಬಂಧಿಕರು ಅಲ್ಲ ಎಂದು ನುಡಿಯುತ್ತಾರೆ. ನೀವು ಅವರ ಸಂಬಂಧಿಕರಿಗೆ ವಿಚಾರ ತಿಳಿಸಿದೆನು ಎಂದು ಹೇಳಿದ್ದು, ಯಾರಿಗೆ ತಿಳಿಸಿರುತ್ತೀರೀ ಎಂದರೆ ಸಾಕ್ಷಿಯು ಕೃಷ್ಣಪ್ಪ ಎಂಬುವವರಿಗೆ ತಿಳಿಸಿರುತ್ತೇನೆ ನಂತರ ಅವರು ಅವರ ಸಂಬಂಧಿಕರಿಗೆಲ್ಲಾ ತಿಳಿಸಿರುತ್ತಾರೆ ಎಂದು ನುಡಿಯುತ್ತಾರೆ. ಕೃಷ್ಣಪ್ಪ ಎಂಬುವವರು ಅಲ್ಲಿಗೆ ಬಂದಿರುತ್ತಾರೆ ಎಂದರೆ ಸಾಕ್ಷಿಯು ಅಲ್ಲಿ ತುಂಬಾ ಜನ ಬಂದಿರುತ್ತಾರೆ ಯಾರು ಯಾರು ಬಂದರು ಎಂದು ಆಗ ಗೊತ್ತಾಗಿರುವುದಿಲ್ಲ ಎಂದು ನುಡಿಯುತ್ತಾರೆ. ಅಲ್ಲಿ ಬಂದಿರುವವರು ನಿಮಗೆ ಪರಿಚಯ ಇರುವ ಹೆಸರು ಗೊತ್ತಾ ಎಂದರೆ ಸಾಕ್ಷಿಯು ಹೆಸರು ಗೊತ್ತಿಲ ಮುಖ ಪರಿಚಯ ಎಂದು ನುಡಿಯುತ್ತಾರೆ. ಮೃತ ವ್ಯಕ್ತಿಯ ತಮ್ಮ ಅವರ ಹೆಸರು ಗೊತ್ತಿದಿಯಾ ಎಂದರೆ ಸಾಕ್ಷಿಯು ಮಂಜುನಾಥ ಎಂದು ನುಡಿಯುತ್ತಾರೆ.

4. ಮಂಜುನಾಥರವರು ಆಂಬುಲೆನ್ಸ್ ನಲ್ಲಿ ಬಂದಿರುತ್ತಾರಾ ಎಂದರೆ ಸಾಕ್ಷಿಯು ಅವರು ಬಂದಿಲ್ಲ ಬೇರೆ ವಾಹನದಲ್ಲಿ ಬಂದಿರುತ್ತಾರೆ ಎಂದು ನುಡಿಯುತ್ತಾರೆ. ಅವರು ಆಸ್ಪತ್ರೆಯಲ್ಲಿ ಇರುತ್ತಾರಾ ಎಂದರೆ ಸಾಕ್ಷಿಯು ಹೌದು ಎಂದು ನುಡಿಯುತ್ತಾರೆ. ಅವರು ನಿಮ್ಮ ಜೊತೆ ದೂರು ನೀಡಲು ಪೋಲೀಸ್ ಠಾಣೆಗೆ ಬಂದಿರಲಿಲ್ಲವಾ ಎಂದರೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ಅವರು ಸ್ವಂತ ತಮ್ಮ ಪೋಲೀಸ್ ಠಾಣೆಗೆ ಬರಬೇಕಾಗಿದ್ದು, ಆದರೆ ನೀವು ಬಂದಿಲ್ಲ ಎಂದು ಸುಳ್ಳು ನೀಡುತ್ತಿದ್ದೀರೀ ಎಂದರೆ ಸರಿಯಲ್ಲ. ನೀವು ಪೋಲೀಸ್ ಠಾಣೆಗೆ ಬಂದು ಈ ರೀತಿ ದೂರು ನೀಡಿ ನ್ಯಾಯಾಲಯಕ್ಕೆ ಬರುವ ಅಭ್ಯಾಸ ಇದೆಯಾ ಎಂದರೆ ಸಾಕ್ಷಿಯು ನಮಗೆ ವ್ಯವಸಾಯ ಮಾಡುವುದೇ ಸಾಕಾಗಿರುತ್ತದೆ ಎಂದು ನುಡಿಯುತ್ತಾರೆ.

**ಆರೋಪಿಯ ವಕೀಲರು ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಲಾಯಿತು.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**ಅ.ನ್ಯಾ.ದಂ. ಮತ್ತು ಜೆ.ಎಂ.ಎಫ್.ಸಿ. ಮಾಗಡಿ.**